# <u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್‌ಸಿ., ಚಳ್ಳಕೆರೆ.</u>

## <u>ಸಿ.ಸಿ ನಂ.414/2022</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚಿಕ್ಕಣ್ಣ | ಪಿ.ಡಬ್ಲ್ಯೂ: 04 |
| ತಂದೆ ಹೆಸರು | : | ಬೊಮ್ಮಣ್ಣ | ಸಿ.ಡಬ್ಲ್ಯೂ: 02 |
| ವಯಸ್ಸು | : | ಸು. 88 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸ | : | ಕಾಮಸಮುದ್ರ, ಚಳ್ಳಕೆರೆ ತಾ. | |

ದಿನಾಂಕ 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### <u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 1 ಲಕ್ಷ್ಮಿದೇವಿ ನನ್ನ ಮೊಮ್ಮಗಳು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂದಿಕರು. ಆರೋಪಿತರು ನನಗಾಗಲೀ ಚಾಸಾ 1 ರವರಿಗಾಗಲೀ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದು ಅವಾಚ್ಯವಾಗಿ ಬೈದು ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆರೋಪಿತರು ಚಾಸಾ 1 ರವರ ಮಾನಕ್ಕೆ ಯಾವುದೇ ರೀತಿ ಕುಂದುಂಟು ಮಾಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಮಾನ್ಯ ಸ.ಸ. ಅವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಪರವಾನಿಗೆಯನ್ನು ಕೋರಿದ್ದು, ಪರವಾನಿಗೆಯನ್ನು ನೀಡಲಾಯಿತು).**

### <u>ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ದಿನಾಂಕ 01.07.2022 ರಂದು ಬೆಳಿಗ್ಗೆ 10.00 ಗಂಟೆಗೆ ಚಳ್ಳಕೆರೆಯ ಕಾಮಸಮುದ್ರ ಗ್ರಾಮದ ರಿಸನಂ.90 ರಲ್ಲಿ ನಾನು ಮತ್ತು ಚಾಸಾ 1 ಲಕ್ಷ್ಮಿದೇವಿ ರವರು ಮನೆಕಟ್ಟಲು ಬೆಸ್ ಮೆಂಟ್ ಹಾಕುತ್ತಿದ್ದಾಗ ಆರೋಪಿರು ಅಕ್ರಮ ಗುಂಪನ್ನು ಕಟ್ಟಿಕೊಂಡು ಸ್ಥಳಕ್ಕೆ ಬಂದು ನನಗೆ ಅವಾಚ್ಯವಾಗಿ ಬೈದು ಮನೆ ಕಟ್ಟಬೇಡಿ ಎಂದು ಹೇಳಿದರು ಎಂದರೆ ಸರಿಯಲ್ಲ.

ಆರೋಪಿತರು ನನಗೆ ಮತ್ತು ಚಾಸಾ 1 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರ ಸೀರೆಯನ್ನು ಎಳೆದಾಡಿ ಹಲ್ಲೆ ಮಾಡಿ ಅವರ ಮಾನಕ್ಕೆ ಕುಂದುಂಟು ಮಾಡಿದರು ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾ 1 ರವರಿಗೆ ನಮ್ಮ ತಂಟೆಗೆ ಬಂದರೆ ನಿನ್ನ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ 3 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಸಂಬಂದಿಕರಾದ ಕಾರಣ ಅವರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದಃ**

ಏನು ಇಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.

# <u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್‌ಸಿ., ಚಳ್ಳಕೆರೆ.</u>

## <u>ಸಿ.ಸಿ ನಂ.414/2022</u>

| | | |
|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮಿದೇವಿ ಪಿ.ಡಬ್ಲ್ಯೂ: 01 |
| ಗಂಡನ ಹೆಸರು | : | ಚಂದ್ರಣ್ಣ ಅಲಿಯಾಸ್ ಚಂದ್ರಪ್ಪ ಸಿ.ಡಬ್ಲ್ಯೂ: 01 |
| ವಯಸ್ಸು | : | ಸು. 26 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಕಾಮಸಮುದ್ರ |
| | | ದಿನಾಂಕ 12.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

### <u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 1 ಚಿಕ್ಕಣ್ಣ ನನ್ನ ತಾತ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂದಿಕರು. ಆರೋಪಿತರು ನನಗಾಗಲೀ ಚಾಸಾ 4 ರವರಿಗಾಗಲೀ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದು ಅವಾಚ್ಯವಾಗಿ ಬೈದು ಹಲ್ಲೆ ಮಾಡಿ ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆರೋಪಿತರು ನನ್ನ ಮಾನಕ್ಕೆ ಯಾವುದೇ ರೀತಿ ಕುಂದುಂಟು ಮಾಡಿರುವುದಿಲ್ಲ. ನಾನು ಆರೋಪಿತರ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ. ನನಗೆ ತೋರಿಸಿದ ದೂರಿನಲ್ಲಿರುವ ಸಹಿ ನನ್ನದಾಗಿರುತ್ತದೆ. ದೂರನ್ನು ನಿಪಿ 1 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು 1ಎ ಎಂದು ಗುರುತಿಸಲಾಯಿತು. ನಾನು ನ್ಯಾಯಾಧೀಶರ ಸಮಕ್ಷಮ ಹೇಳಿಕೆಯನ್ನು ಪೊಲೀಸರು ಹೇಳಿದ ರೀತಿಯಲ್ಲಿ ನೀಡಿರುತ್ತೇನೆ. ನನಗೆ ಈಗ ತೋರಿಸಿದ ಹೇಳಿಕೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ಹೇಳಿಕೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು 2ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಮಾನ್ಯ ಸ.ಸ. ಅವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಪರವಾನಿಗೆಯನ್ನು ಕೋರಿದ್ದು, ಪರವಾನಿಗೆಯನ್ನು ನೀಡಲಾಯಿತು).**

**ಪಾಟೀ ಸವಾಲು ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 01.07.2022 ರಂದು ಬೆಳಿಗ್ಗೆ 10.00 ಗಂಟೆಗೆ ಚಳ್ಳಕೆರೆಯ ಕಾಮಸಮುದ್ರ ಗ್ರಾಮದ ರಿಸನಂ.90 ರಲ್ಲಿ ನಾನು ಮತ್ತು ಚಾಸಾ 4 ಚಿಕ್ಕಣ್ಣ ರವರು ಮನೆಕಟ್ಟಲು ಬೆಸ್ ಮೆಂಟ್ ಹಾಕುತ್ತಿದ್ದಾಗ ಆರೋಪಿರು ಅಕ್ರಮ ಗುಂಪನ್ನು ಕಟ್ಟಿಕೊಂಡು ಸ್ಥಳಕ್ಕೆ ಬಂದು ನನಗೆ ಅವಾಚ್ಯವಾಗಿ ಬೈದು ಮನೆ ಕಟ್ಟಬೇಡಿ ಎಂದು ಹೇಳಿದರು ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾ 4 ಚಿಕ್ಕಣ್ಣ ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ. ಆರೋಪಿತರು ನನ್ನ ಸೀರೆಯನ್ನು ಎಳೆದಾಡಿ ಹಲ್ಲೆ ಮಾಡಿ ನನ್ನ ಮಾನಕ್ಕೆ ಕುಂದುಂಟು ಮಾಡಿದರು ಎಂದರೆ ಸರಿಯಲ್ಲ. ಆರೋಪಿತರು ನನಗೆ ಮತ್ತು ಚಾಸಾ 4 ರವರಿಗೆ ನಮ್ಮ ತಂಟೆಗೆ ಬಂದರೆ ನಿನ್ನ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ನಿಪಿ 1 ರಂತೆ ದೂರನ್ನು ನೀಡಿದೆನು ಎಂದರೆ ಸರಿಯಲ್ಲ. ನಾನು ಘಟನೆ ಕುರಿತು ನ್ಯಾಯಾಧೀಶರ ಸಮಕ್ಷಮ ನಿಪಿ 2 ರಂತೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೊಲೀಸರು ಹೇಳಿದ ರೀತಿಯಲ್ಲಿ ನಾನು ಸದರಿ ಹೇಳಿಕೆಯನ್ನು ನೀಡಿದ್ದೇನೆ ಎಂದು ನುಡಿದಿರುತ್ತಾರೆ. ಆರೋಪಿತರು ನನ್ನ ಸಂಬಂದಿಕರಾದ ಕಾರಣ ಅವರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದಃ**

ಏನು ಇಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.